# ಪ್ರೇಮತತ್ತ್ವ

ಸೂಫಿ ಸಂತಳಾಗಿದ್ದ ರಬಿಯಾಳನ್ನು ಒಮ್ಮೆ ಯಾರೋ ಕೇಳಿದರು 'ನೀನು ದೇವರನ್ನು ಪ್ರೀತಿಸುವೆಯಾ?', 'ಹೌದು ಪ್ರೀತಿಸುತ್ತೇನೆ', 'ಹಾಗಾದರೆ ಸೈತಾನನನ್ನು ದ್ವೇಷಿಸುವೆಯಾ?', 'ನನ್ನ ಹೃದಯದಲ್ಲಿ ದೈವೀ ಪ್ರೇಮ ಎಷ್ಟೊಂದು ತುಂಬಿಕೊಂಡಿದೆ ಎಂದರೆ, ಸೈತಾನನ್ನು ದ್ವೇಷಿಸಲು ಅಲ್ಲಿ ಎಡೆಯೇ ಇಲ್ಲ!' ಎಂದು ಪ್ರೇಮದ ಸಾಕಾರಮೂರ್ತಿಯಾಗಿದ್ದ ರಬಿಯಾ ಹೇಳಿದಳಂತೆ.

ಇದೇ ಬಗೆಯ ಪ್ರೇಮದ ಹೊಳೆ ಗಾಂಧೀಜಿಯಲ್ಲೂ ಹರಿದಿದೆ. 'ಧರ್ಮದ ನೆಲೆ ಹೃದಯ. ಎಲ್ಲಿ ಪ್ರೀತಿಯಿದೆಯೋ ಅಲ್ಲಿ ದೇವರಿದ್ದಾನೆ. ಈ ಜಗತ್ತಿನಲ್ಲಿರುವ ಅತ್ಯಂತ ಬಲಯುತ ಶಕ್ತಿಯೆಂದರೆ ಪ್ರೀತಿ. ಪ್ರೀತಿಯಿಲ್ಲದ ಜೀವನ ಸಾವಿಗೆ ಸಮ. ಪ್ರೀತಿಯು ಏನನ್ನೂ ಪಡೆದುಕೊಳ್ಳುವುದಿಲ್ಲ, ಕೊಡುವುದಷ್ಟೇ ಅದಕ್ಕೆ ಗೊತ್ತು. ಪ್ರೀತಿ ತಾಳ್ಮೆಯ ಪ್ರತಿರೂಪ. ಪ್ರೀತಿಗೆ ರೋಷವಿಲ್ಲ. ಪ್ರೀತಿಯೆಂದೂ ಪ್ರತೀಕಾರವನ್ನು ಬಯಸುವುದಿಲ್ಲ. ಪ್ರೀತಿ ಸ್ವಾರ್ಥವನ್ನು ಅಳಿಸುತ್ತದೆ. ಅದು ಧೈರ್ಯಶಾಲಿಯ ವಿಶೇಷಾಧಿಕಾರ, ದ್ವೇಷವನ್ನು ಗೆಲ್ಲುವುದು ಪ್ರೀತಿಯಿಂದ ಮಾತ್ರ ಸಾಧ್ಯ. ಪ್ರೀತಿ ಪರಮಸತ್ಯ ಮತ್ತು ಅದೇ ಜೀವನದ ನಿಯಮ' ಎಂದು ಹೇಳಿದ್ದಾರೆ. ಈ ಪ್ರೇಮತತ್ತ್ವ ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ನಮ್ಮ ಬಾಳಿಗೆ ಒಳ್ಳೆಯದನ್ನೇ ಮಾಡಬಲ್ಲವು ಎಂದು ಗಾಂಧಿ ದೃಢವಾಗಿ ನಂಬಿದ್ದರು ಮತ್ತು ಕೊನೆಯವರೆಗೂ ಪ್ರೇಮಪಥದಲ್ಲೇ ಬಾಳಿದರು.

ಏಸುಕ್ರಿಸ್ತನಲ್ಲಿ ಪ್ರೀತಿ ಮತ್ತು ಅಹಿಂಸೆಯ ಶ್ರೇಷ್ಠ ಗುಣಗಳಿರಬಹುದು! ಆದರೆ, ನಲವತ್ತು ವರ್ಷಗಳಿಗೂ ಹೆಚ್ಚುಕಾಲ ಪ್ರೀತಿ ಮತ್ತು ಅಹಿಂಸೆಗಳನ್ನೇ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಗಾಂಧಿ ಈ ಗುಣಗಳಿಗೆ ಸಂಕೇತವಾಗಿದ್ದರು ಎಂದು ರಾಮಮನೋಹರ ಲೋಹಿಯಾ ಅವರು ಹೇಳಿರುವ ಮಾತುಗಳು ಗಾಂಧೀಜಿ ಅವರ ವ್ಯಕ್ತಿತ್ವವನ್ನು ಇನ್ನಷ್ಟು ಎತ್ತರಕ್ಕೆ ಕರೆದೊಯ್ಯುತ್ತವೆ. ವಾಸ್ತವ ಸಂಗತಿ ಎಂದರೆ, ಗಾಂಧಿ ಅವರ ಪ್ರೇಮತತ್ತ್ವದ ಫಲಭರಿತ ವೃಕ್ಷದ ನೆರಳಿನಲ್ಲಿ ಭಾರತದ ಬಹುತ್ವ ಇಂದಿಗೂ ಉಸಿರಾಡುತ್ತಿದೆ. ಆದ್ದರಿಂದಲೇ ಬುದ್ಧ ಮತ್ತು ಏಸುವಿನ ನಂತರ ಜಗತ್ತು ಕಂಡ ಬಹುದೊಡ್ಡ ಕರುಣಾಳು ಎಂದರೆ ಗಾಂಧೀಜಿ ಮಾತ್ರ. ಅವರಲ್ಲಿದ್ದ ಪ್ರೇಮತತ್ತ್ವ ಯಾವ ಬಗೆಯದು ಎಂಬುದನ್ನು ಕವಿ ರವೀಂದ್ರನಾಥ ಟ್ಯಾಗೋರ್ ಹೀಗೆ ಹೇಳುತ್ತಾರೆ: 'ಯಾರಾದರೂ ನನ್ನ ಕತ್ತು ಹಿಸುಕಿ ಕೊಲ್ಲಲು ಬಂದರೆ, ನಾನು ಸಹಾಯಕ್ಕಾಗಿ ಕೂಗಿಕೊಳ್ಳುತ್ತೇನೆ. ಆದರೆ ಗಾಂಧೀಜಿಗೆ ಈ ಅನುಭವವಾದರೆ, ಅವರೆಂದೂ ಸಹಾಯಕ್ಕಾಗಿ ಕೂಗಿಕೊಳ್ಳುವುದಿಲ್ಲ. ಅವರು ಕೊಲೆಗಾರನನ್ನು ನೋಡಿ ಗಟ್ಟಿಯಾಗಿ ನಗಬಹುದು. ಅಲ್ಲದೆ, ಸಾಯಲೇಬೇಕಾದ ಸಂದರ್ಭ ಬಂದರೆ, ಅವರು ನಸುನಗುತ್ತಾ ಸಾಯುತ್ತಾರೆ'. ಇದನ್ನೇ ಗಾಂಧಿ ಹೀಗೆ ಹೇಳಿದರು: 'ಕತ್ತಿಯನ್ನು ಎಸೆದಮೇಲೆ, ಪ್ರೇಮದ ಬಟ್ಟಲಲ್ಲದೆ ನನ್ನ ವಿರೋಧಿಗಳಿಗೆ ನಾನು ಕೊಡಬಹುದಾದ ವಸ್ತು ಬೇರೆ ಏನೂ ಇಲ್ಲ. ಆ ಪ್ರೇಮದ ಬಟ್ಟಲನ್ನೇ ನೀಡುತ್ತಾ ಅವರನ್ನು ನನ್ನ ಹತ್ತಿರಕ್ಕೆ ಸೆಳೆದುಕೊಳ್ಳಲು ನಿರೀಕ್ಷಿಸುತ್ತೇನೆ'. ಜಗತ್ತಿನ ಯಾವುದೇ ಅನುಭಾವಿಯಾಗಲಿ, ಯಾವುದೇ ಮಹಾಕಾವ್ಯವಾಗಲಿ ಅಂತಿಮವಾಗಿ ಹೇಳುವುದು ಇದೇ ಪ್ರೇಮತತ್ತ್ವದ ದರ್ಶನವನ್ನು.

ಗಾಂಧೀಜಿ ಅವರ ಬದುಕಿನ ಅರ್ಥವನ್ನು ಅರಿಯಲು ಅವರ ಮಾತು ಮತ್ತು ಬರವಣಿಗೆಗಳತ್ತ ಕಣ್ಣು ಹೊರಳಿಸಬೇಕಿಲ್ಲ, ಅವರ ಬಾಳಿನ ಘಟನೆಗಳ ಮೂಲಕ ಅರಿಯುವುದೇ ಉನ್ನತ ಮಾರ್ಗ ಎಂದು ಲೋಹಿಯಾ ಸೂಚಿಸುತ್ತಾರೆ. ಗಾಂಧಿ ಜೈಲಿಗೆ ಹೋಗುವಾಗಲೆಲ್ಲ ಎಣೆಯಿಲ್ಲದ ಸಂತಸದಿಂದ ಜೈಲಿಗೆ ಹೋಗುವುದಾಗಿ ಹೇಳುತ್ತಿದ್ದರು. ತಮ್ಮ ಗೆಳೆಯರೊಬ್ಬರಿಗೆ ಬರೆದ ಪತ್ರದಲ್ಲಿ 'ಯಾವುದೇ ನೋವನ್ನು ಸಂತಸದಿಂದ ಅನುಭವಿಸುವುದಾದರೆ, ಆ ನೋವು ಸಂತಸವಾಗಿ ಪರಿವರ್ತಿಸಲ್ಪಟ್ಟು ನಿಮಗೆ ಹೇಳಲಾಗದಷ್ಟು ಹರ್ಷವನ್ನುಂಟು ಮಾಡಬಲ್ಲದು' ಎಂದು ಹೇಳಿದ್ದರು. ಗಾಂಧಿ ಹೇಳುವಂತೆ ಅಹಿಂಸೆ ಎಂದರೆ 'ಅನಂತ ಪ್ರೇಮ' ಎಂದರ್ಥ. ಅಂದರೆ, ಅನಂತವಾದ ಕಷ್ಟ ಸಹಿಷ್ಣುತಾ ಶಕ್ತಿ. ಇದನ್ನೆಲ್ಲಾ ತಿಳಿದರೆ, ಇಂದಿನ ಭಾರತ ಗಾಂಧೀಜಿ ಅವರ ಪ್ರೇಮತತ್ತ್ವದಿಂದ ಕಲಿಯಬೇಕಾದ್ದು ಸಾಕಷ್ಟಿದೆ ಎನಿಸುತ್ತದೆ.

ಗಾಂಧೀ ಅವರ ಸ್ವಾತಂತ್ರ್ಯ ಮತ್ತು ಸಾಮರಸ್ಯದ ಉದ್ದೇಶ ಸೀಮಿತವಾದದ್ದಲ್ಲ. 'ನನ್ನ ಮಹದೋದ್ದೇಶವು ಕೇವಲ ಭಾರತೀಯ ಜನತೆಯ ಭ್ರಾತೃತ್ವವಷ್ಟೇ ಅಲ್ಲ! ನನ್ನ ಮಹದೋದ್ದೇಶವು ಕೇವಲ ಭಾರತದ ಸ್ವಾತಂತ್ರ್ಯ ಅಲ್ಲ! ಭಾರತದ ಸ್ವಾತಂತ್ರ್ಯ ಸಿದ್ಧಿಯ ಮೂಲಕ ಮಾನವನ ಭ್ರಾತೃತ್ವದ ಮಹದೋದ್ದೇಶವನ್ನು ಸಾಧಿಸಲು, ಮುನ್ನಡೆಸಲು ಪ್ರಯತ್ನಿಸುತ್ತೇನೆ' ಇದು ಗಾಂಧೀಜಿ ಅವರ ಆದರ್ಶವಾಗಿತ್ತು. ಈ ದಾರಿಯಲ್ಲಿ ಸಾಗುತ್ತಿದ್ದ ಗಾಂಧಿಗೆ ಅದು ಕೇವಲ 'ದಾರಿ' ಮಾತ್ರವೇ ಆಗಿರಲಿಲ್ಲ! ಅವರಿಗೆ 'ದಾರಿ'ಯೇ ಸರ್ವಸ್ವವಾಗಿತ್ತು. ಹಿಂಸೆಯಿಂದ ಕೂಡಿದ ದಾರಿ ಹಿಂಸೆಯ ಸ್ವರಾಜ್ಯವನ್ನೇ ನೀಡುತ್ತದೆ. ಅದು ಜಗತ್ತಿಗೂ ಉಪದ್ರವಕಾರಿ. ಭಾರತಕ್ಕೂ ಸಹ. ಈ ದಾರಿ ಹಾಗೂ ಗುರಿಗಳನ್ನು ಬೇರ್ಪಡಿಸುವ ಯಾವ ಗೋಡೆಯೂ ಇಲ್ಲ ಎಂದು ಹೇಳಿದ ಗಾಂಧೀಜಿಗೆ ಗುರಿ ಎಷ್ಟು ಮುಖ್ಯವೋ ದಾರಿಯೂ ಅಷ್ಟೇ ಮುಖ್ಯ ಎಂಬ ಅರಿವಿತ್ತು.

ತಮ್ಮ ಜೀವಿತದುದ್ದಕ್ಕೂ ಹಿಂದೂ ಮತ್ತು ಮುಸ್ಲಿಂರ ಏಕತೆಗಾಗಿ ಕಠಿಣವಾಗಿ ಶ್ರಮಿಸಿದ ಗಾಂಧಿ ಕೊನೆಗೆ ಧರ್ಮಾಂಧನೊಬ್ಬನ ಗುಂಡಿಗೆ ಬಲಿಯಾದದ್ದು ವಿಪರ್ಯಾಸ. 'ಭಾರತವು ಹಿಂಸೆಯನ್ನು ತನ್ನ ಪಥವನ್ನಾಗಿ ಮಾಡಕೊಂಡರೆ ಮತ್ತು ಆಗ ನಾನು ಬದುಕಿದ್ದರೆ, ನಾನು ಭಾರತದಲ್ಲಿ ವಾಸಿಸಲು ಸ್ವಲ್ಪವೂ ಇಷ್ಟಪಡುವುದಿಲ್ಲ' ಎಂದು ಹೇಳಿದ್ದರು. ಗಾಂಧಿ ಹಂತಕನ ಗುಂಡಿಗೆ ಬಲಿಯಾದದ್ದನ್ನು ಕೇಳಿದ ಜಾರ್ಜ್ ಬರ್ನಾಡ್ ಷಾ ಹೇಳಿದ್ದು ಹೀಗೆ: 'ಒಳ್ಳೆಯತನವು ಎಷ್ಟೊಂದು ಅಪಾಯಕಾರಿ!'

ತಮ್ಮ ಸಾವಿಗೆ ಎರಡು ದಿನ ಮುಂಚೆ ಗಾಂಧೀಜಿ ಅಮೃತ ಕೌರ್ ಅವರಿಗೆ 'ಒಂದು ವೇಳೆ ನಾನು ಒಬ್ಬ ಬುದ್ಧಿಹೀನನ ಗುಂಡಿಗೆ ಬಲಿಯಾದರೆ ಆತನ ಬಗ್ಗೆ ಕೋಪಗೊಳ್ಳದೆ ನನ್ನೊಳಗೆ ನಗುತ್ತಲೇ ಇರುತ್ತೇನೆ. ದೇವರು ನನ್ನ ಹೃದಯ ಮತ್ತು ತುಟಿಗಳ ಮೇಲೆ ಸದಾ ಇರುತ್ತಾನೆ. ನೀನು ಈ ವಿಚಾರದಲ್ಲಿ ನನಗೊಂದು ಭಾಷೆ ಕೊಡಬೇಕು; ಒಂದು ವೇಳೆ ಇಂಥದೊಂದು ಕೃತ್ಯ ನಡೆದರೆ, ನನಗಾಗಿ ಒಂದು ಹನಿ ಕಣ್ಣೀರನ್ನೂ ಸುರಿಸಬಾರದು' ಎಂದು ಹೇಳಿದ್ದರು. ಆದ್ದರಿಂದಲೇ ಕವಿ ಕೆಎಸ್‌ನ ಹೀಗೆ ಹೇಳಿದ್ದು: 'ಸ್ವಾತಂತ್ರ್ಯಾನಂತರ ಭಾರತದಲ್ಲಿ ನಿಜವಾದ ದುಃಖಿ ಎಂದರೆ ಗಾಂಧಿ'.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ನಿಮ್ಮ ನೈತಿಕ ಪ್ರವೃತ್ತಿ ಎಷ್ಟು ಉನ್ನತವಾಗಿರುತ್ತದೋ, ನಿಮ್ಮ ಉನ್ನತಿಯೂ ಅಷ್ಟೇ ಎತ್ತರದ್ದಾಗಿರುತ್ತದೆ.
  —ಸ್ವಾಮಿ ವಿವೇಕಾನಂದ
- ಜೀವನದಲ್ಲಿ ಭಯ ಪಡುವಂತದ್ದು ಏನೂ ಇಲ್ಲ. ಹೆಚ್ಚು ತಿಳಿದುಕೊಂಡಷ್ಟೂ ಭಯ ಕಡಿಮೆಯಾಗುತ್ತದೆ.
  —ಮೇಡಂ ಕ್ಯೂರಿ
- ಪ್ರೀತಿಯನ್ನು ಯಾರು ಬಯಸುತ್ತಾರೋ ಅವರು ಮೊದಲು ಪ್ರೀತಿಯನ್ನು ನೀಡಬೇಕು.
  —ಕಬೀರ
- ಶ್ರೇಷ್ಠ ಸತ್ಯವೆಂದರೆ ಪ್ರಾಮಾಣಿಕತೆ, ಅತಿದೊಡ್ಡ ಸುಳ್ಳೆಂದರೆ ಅಪ್ರಾಮಾಣಿಕತೆ.
  —ಖಲೀಫಾ ಅಬೂಬಕರ್
- ನಮ್ಮನ್ನು ಎಲ್ಲ ಮರೆವು ಪಾಪಗಳಿಂದ ಮುಕ್ತಗೊಳಿಸುವುದೇ ವಿದ್ಯೆ.
  —ಚಂದ್ರಶೇಖರ ಕಂಬಾರ
- ತನ್ನ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿರುವವನಿಗೆ ಜಗತ್ತು ಎಂದೂ ಬೇಸರದ್ದಾಗಿ ಕಾಣುವುದಿಲ್ಲ.
  —ಮಹಾತ್ಮಗಾಂಧಿ
- ಪರಿಸ್ಥಿತಿಯು ಪ್ರತಿಕೂಲವಾಗಿರುವಾಗ ಮಾತನಾಡುವುದೂ ಸಾಹಸವೇ.
  —ರಂ.ಶ್ರೀ. ಮುಗಳಿ
- ಚಪ್ಪಾಳೆ ನನಗಲ್ಲ, ನನ್ನೊಳಗಿನ ಸರಸ್ವತಿಗೆ.
  —ರಾಜಕುಮಾರ್